# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | MONDAY | 2-5-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇಂಡೋನೇಶಿಯಾದ ಪಾಮೆಣ್ಣೆ ರಫ್ತು ನಿರ್ಬಂಧ ಕಚ್ಚಾ ಪಾಮೆಣ್ಣೆಗೂ ವಿಸ್ತರಣೆ

ಇಂಡೋನೇಶಿಯಾದಿಂದ ಪಾಮೆಣ್ಣೆ ರಫ್ತು ನಿರ್ಬಂಧ ಕಚ್ಚಾ ಪಾಮೆಣ್ಣೆಯನ್ನು ಒಳಗೊಂಡಿದೆಯೆನ್ನಲಾಗಿದ್ದು, ಇದರಿಂದ ಭಾರತಕ್ಕೆ ರಫ್ತಾಗಬೇಕಿದ್ದ ಕಚ್ಚಾ ಪಾಮೆಣ್ಣೆಗೂ ತಡೆಯಾಗಲಿದೆಯೆನ್ನಲಾಗಿದೆ. ಖಾದ್ಯತೈಲ ದರಗಳು ಈಗಾಗಲೇ ಹೆಚ್ಚಳವಾಗಿದ್ದು ಇನ್ನೂ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಮುಂದೆ ಉತ್ಪಾದನೆ ಹೆಚ್ಚಳ ಹಾಗೂ ದಾಸ್ತಾನು ಹೆಚ್ಚಳಗೊಂಡಲ್ಲಿ ರಫ್ತು ನಿರ್ಬಂಧ ತೆರವುಗೊಳ್ಳಬಹುದು.

## ಇಂಡೋನೇಶಿಯಾದ ಪಾಮೆಣ್ಣೆ ರಫ್ತು ದೀರ್ಘಾವದಿ ಮುಂದುವರಿಕೆ ಸಾಧ್ಯತೆ ವಿರಳ

ಇಂಡೋನೇಶಿಯಾ ಪ್ರತಿ ತಿಂಗಳು ಸುಮಾರು ೪ ಮಿಲಿಯನ್ ಟನ್ ಪಾಮೆಣ್ಣೆ ಉತ್ಪಾದಿಸುತ್ತದೆಯೆನ್ನಲಾಗಿದೆ ಹಾಗೂ ಸುಮಾರು ೧.೫ ಮಿಲಿಯನ್ ಟನ್ ತಿಂಗಳ ಅದರ ಸ್ವದೇಶಿ ಬಳಕೆಗೆ ಬೇಕಾಗಬಹುದೆನ್ನಲಾಗಿದೆ. ೨೦೨೧ ರಲ್ಲಿ ಅಲ್ಲಿನ ಒಟ್ಟು ಉತ್ಪಾದನೆಯಾದ ೫೧.೩ ಮಿಲಿಯನ್ ಟನ್‌ಗಳಲ್ಲಿ ಆ ದೇಶದ ಬಳಕೆ ೧೮.೪ ಮಿಲಿಯನ್ ಟನ್‌ಗಳೆನ್ನಲಾಗಿದೆ. ಅಂದರೆ ಸುಮಾರು ಆ ದೇಶದ ಬಳಕೆಯ ಇಮ್ಮಡಿಯಷ್ಟು ರಫ್ತು ಮಾಡುತ್ತಿದೆ. ರಫ್ತು ನಿರ್ಬಂಧದಿಂದ ಅಲ್ಲಿ ದಾಸ್ತಾನು ಸಮಸ್ಯೆ ಹಾಗೂ ಪಾಮೆಣ್ಣೆ ಉತ್ಪಾದನಾ ಚಟುವಟಿಕೆಗಳಿಗೆ ಸಮಸ್ಯೆಯಾಗಲಿದೆ. ಇದರಿಂದ ರಫ್ತು ನಿರ್ಬಂಧ ಸಡಿಲಿಸಬೇಕಾಗುವ ಅನಿವಾರ್ಯತೆಗೆ ಸಿಲುಕಬಹುದಾಗಿದೆ. ಸಧ್ಯದ ಜಾಗತಿಕ ಸ್ಥಿತಿಯನ್ನು ಗಮನಿಸಿದಾಗ ಖಾದ್ಯತೈಲಗಳು ಹೆಚ್ಚಳದಲ್ಲೇ ಮುಂದುವರಿಯುವ ಸಾಧ್ಯತೆಗಳಿವೆ.

## ಅರ್ಜೆಂಟಿನಾ, ಬ್ರೆಜಿಲ್‌ಗಳಲ್ಲಿ ಸೋಯಾಬೀನ್ ಎಣ್ಣೆ ದರ ತೀವ್ರ ಹೆಚ್ಚಳ

ಅರ್ಜೆಂಟಿನಾ, ಬ್ರೆಜಿಲ್‌ಗಳಲ್ಲಿ ಸೋಯಾಬೀನ್ ಎಣ್ಣೆ ಫ್ಯೂಚರ್ ದರ ತೀವ್ರ ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಪಾಮೆಣ್ಣೆ ಪೂರೈಕೆ ಇಳಿಕೆ, ಇಂಡೋನೇಶೀಯಾದ ಪಾಮೆಣ್ಣೆ ರಫ್ತು ನಿರ್ಬಂಧ, ಸೂರ್ಯಕಾಂತಿ ಎಣ್ಣೆ ಪೂರೈಕೆ ಇಳಿಕೆ ಮುಂತಾದ ಜಾಗತಿಕ ವಿದ್ಯಮಾನಗಳಿಂದ ಸೋಯಬೀನ್ ಎಣ್ಣೆ ಫ್ಯೂಚರ್ ದರಗಳೂ ತೀವ್ರ ಹೆಚ್ಚಳ ಕಂಡಿದೆ. ಜಾಗತಿಕ ಖಾದ್ಯತೈಲ ದರ ಹೆಚ್ಚಳದ ಪರಿಣಾಮ ದೇಶೀ ಮಾರುಕಟ್ಟೆಗೂ ತಟ್ಟಲಾರಂಬಿಸಿದೆ.

## ಭಾರತದ ಸಾಕಷ್ಟು ಖಾದ್ಯತೈಲ ದಾಸ್ತಾನು ಹೊಂದಿದೆ

ಇತ್ತೀಚಿನ ಖಾದ್ಯತೈಲ ದರ ಹೆಚ್ಚಳ, ಅಂತರಾಷ್ಟ್ರೀಯ ವಿದ್ಯಮಾನಗಳನ್ನು ಗಮನಿಸಿ, ಭಾರತ ಸಾಕಷ್ಟು ಖಾದ್ಯತೈಲ ದಾಸ್ತಾನು ಹೊಂದಿದೆಯೆಂದು ಸರಕಾರ ಹೇಳಿದೆಯೆನ್ನಲಾಗಿದೆ. ಸದ್ಯ ದೇಶ ೨೧ ಲಕ್ಷ ಟನ್ ಖಾದ್ಯತೈಲ ದಾಸ್ತಾನು ಹೊಂದಿದ್ದು, ಇನ್ನು ೧೨ ಲಕ್ಷ ಟನ್ ಸಾಗಾಣಿಕೆಯಲ್ಲಿದ್ದು ಈ ತಿಂಗಳು ಭಾರತಕ್ಕೆ ಬರಲಿದೆಯಿನ್ನಲಾಗಿದೆ. ಈ ವರ್ಷ ೨೦೨೧-೨೨ ರಲ್ಲಿ ೧೨೬.೧೦ ಲಕ್ಷ ಟನ್ ಸೋಯಾಬೀನ್ ದೇಶದಲ್ಲಿ ಉತ್ಪಾದನೆಯಾಗಲಿದ್ದು ಹಿಂದಿನ ವರ್ಷ ೧೧೨ ಲಕ್ಷ ೧೧೨ ಲಕ್ಷ ಟನ್‌ಗಿಂತ ಅಧಿಕವಾಗಿದೆ. ಸಾಸಿವೆ ಉತ್ಪಾದನೆ(೩೭ ಶೇಕಡಾ ಅಧಿಕ ಬಿತ್ತನೆಯಿಂದ) ೧೧೪ ಲಕ್ಷ ಟನ್ ಗಳಾಗಿದೆಯೆನ್ನಲಾಗಿದೆ. ಸರಕಾರ ನಿರಂತರ ಖಾದ್ಯತೈಲ ದರ ಲಭ್ಯತೆ, ಪೂರೈಕೆ ಇತ್ಯಾದಿಗಳ ಅವಲೋಕನ ಮಾಡುತ್ತಿದ್ದು ಅಗತ್ಯ ಕ್ರಮಗಳನ್ನು ಕೈ ಗೊಳ್ಳುತ್ತಿದೆಯೆನ್ನಲಾಗಿದೆ. ಜಾಗತಿಕ ಉತ್ಪಾದನೆಯ ಹಿನ್ನಡೆ ಹಾಗೂ ರಫ್ತು ಮಾಡುತ್ತಿರುವ ದೇಶಗಳ ಅಧಿಕ ತೆರಿಗೆಯಿಂದ ಸದ್ಯ ಅಂತರಾಷ್ಟ್ರೀಯ ಖಾದ್ಯತೈಲ ದರ ಒತ್ತಡದಲ್ಲಿದೆ, ಹೆಚ್ಚಳದಲ್ಲಿದೆ.